# ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಪಾಶುಪತ–ಕಾಳಾಮುಖ ಸಾಧನ ಪಂಥ

**ಶೋಭಾರಾಣಿ ಎನ್.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು.

**Article Link: https://aksharasurya.com/2024/04/shobharani-n-2.php**

**DOI: https://doi.org/10.5281/zenodo.10938065**

## ABSTRACT:

ಭಾರತೀಯ ಮತ್ತು ವಿಶೇಷವಾಗಿ ಕರ್ನಾಟಕದ ಆಧ್ಯಾತ್ಮಿಕ ಆರಾಧನಾ ಪಂಥಗಳಲ್ಲಿ ಪಾಶುಪತ–ಕಾಳಾಮುಖ ಪಂಥವು ಬಹು ಮುಖ್ಯವಾದುದು. ಆಧ್ಯಾತ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ಮಾತ್ರವಲ್ಲದೇ, ದೇವಾಲಯ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೂಡ ಈ ಸಾಧನಾ ಪಂಥದ ಸಾಧಕರು ನೀಡಿರುವ ಕೊಡುಗೆ ಅಪಾರವಾದುದು. ಕರ್ನಾಟಕದ ಬಹುತೇಕ ದೇವಾಲಯಗಳು ಪಾಶುಪತ–ಕಾಳಾಮುಖರಿಂದ ನಿರ್ಮಾಣಗೊಂಡಿವೆ. ಒಂದು ಕಾಲದಲ್ಲಿ ಅಂದರೆ ಕ್ರಿ.ಶ. 12ನೇ ಶತಮಾನಕ್ಕಿಂತ ಸಾಕಷ್ಟು ಪೂರ್ವದಲ್ಲೆ ಈ ಮಾರ್ಗವು ಕರ್ನಾಟಕದಲ್ಲಿ ಪ್ರಮುಖ ಆಧ್ಯಾತ್ಮಿಕ ಮಾರ್ಗವಾಗಿ ಪ್ರಭಾವಶಾಲಿಯಾಗಿತ್ತು. ಹಲವು ರಾಜರುಗಳು ಈ ಮಾರ್ಗಕ್ಕೆ ಪ್ರೋತ್ಸಾಹ ಮತ್ತು ಆಶ್ರಯವನ್ನು ನೀಡಿದ್ದಲ್ಲದೆ, ಸ್ವತಃ ಇದರ ಅನುಯಾಯಿಗಳೂ ಆಗಿದ್ದ ಉದಾಹರಣೆಗಳಿವೆ. ಲಾಕುಳೀಶ, ಕಾಳಾಮುಖ, ಪಾಶುಪತ, ಕಾಪಾಲಿಕ ಮೊದಲಾದ ದಕ್ಷಿಣಾಚಾರದ ಪಂಥಗಳೆಲ್ಲ ಒಂದೆಯೇ ಅಥವಾ ಬೇರೆ ಬೇರೆಯೇ, ಒಂದೇ ಪಂಥದ ವಿಭಿನ್ನ ಶಾಖೆಗಳೇ ಎಂಬುದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಡಾ. ಭಂಡಾರ್ಕರ್, ಕಪಟರಾಳ ಕೃಷ್ಣರಾವ್ ಮೊದಲಾದ ದೇಶೀ ವಿದ್ವಾಂಸರೂ, ಡಾ. ಲಾರೆನ್ ಝೆನ್ ರಂತಹ ವಿದೇಶೀ ವಿದ್ವಾಂಸರು, ಮತ್ತು ಈಚೆಗೆ ಡಾ. ವಸುಂಧರ ಫಿಯೋಜಾರಂತಹ ಆಧುನಿಕ ವಿದ್ವಾಂಸರೂ ಶೈವ ಸಾಧನಾ ಪಂಥಗಳನ್ನು ಕುರಿತು ಸಂಶೋಧನೆ ನಡೆಸಿದ್ದಾರಾದರೂ ಸಾಕಷ್ಟು ಅಗತ್ಯ ದಾಖಲೆಗಳ ಅಭಾವದಿಂದ ಈ ಶೈವಪಂಥಗಳನ್ನು ಕುರಿತು ಹೆಚ್ಚಿನ ಸಂಶೋಧನೆಗಳು ನಡೆದಿಲ್ಲ. ಲಾಕುಳೀಶರು ಕರ್ನಾಟಕದಲ್ಲಿ ನೆಲೆನಿಂತದ್ದು ಸರಿಸುಮಾರು ಬಾದಾಮಿ ಚಾಲುಕ್ಯರ ಕಾಲದಲ್ಲಾದರೂ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಈ ಪಂಥದ ಮಹತ್ವ ಉತ್ಕರ್ಷಕ್ಕೇರಿದ್ದು ಕ್ರಿ.ಶ.12ನೇ ಶತಮಾನದಲ್ಲಿ, ಕಲ್ಯಾಣಿ ಚಾಲುಕ್ಯರ ಆಡಳಿತದ ಅವಧಿಯಲ್ಲಿ. ಈ ಕಾಲದಲ್ಲಿ ಕಾಳಾಮುಖರು ಕರ್ನಾಟಕದ ರಾಜ

ಕೀಯದಲ್ಲೂ ಪ್ರಭಾವಿಗಳಾಗಿದ್ದುದಾಗಿ ಅರಸೀಕೆರೆಯ ಸೋಮೇಶ್ವರನ ಶಾಸನ ಮೊದಲಾದವುಗಳಿಂದ ತಿಳಿದುಬರುತ್ತದೆ. ಈ ಮಾರ್ಗದ ಪ್ರಭಾವ ಕರ್ನಾಟಕದ ವಚನ ಚಳುವಳಿಯ ಮೇಲೂ ಸಾಕಷ್ಟು ಆಗಿದ್ದು, ಬಹಳಷ್ಟು ವಚನಕಾರರ ಸಾಧನೆ ಮತ್ತು ವೈಚಾರಿಕತೆಯನ್ನು ಈ ಪಂಥ ಪ್ರಭಾವಿಸಿದೆ. ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಇಷ್ಟು ಮಹತ್ವದ್ದಾಗಿದ್ದ ಆಧ್ಯಾತ್ಮಿಕ ಪಂಥವು ಇಂದು ಮುಖ್ಯವಾಹಿನಿಯಿಂದ ದೂರವಾಗಿದೆ. ಇದನ್ನು ಮತ್ತೆ ಶೋಧಿಸಿಕೊಳ್ಳಬೇಕಾದ ಅಗತ್ಯವನ್ನು ವಿವರಿಸಿಕೊಳ್ಳುವುದು ಮತ್ತು ಕಂಡುಕೊಳ್ಳುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

## KEYWORDS:

ಕರ್ನಾಟಕದ ಆಧ್ಯಾತ್ಮಿಕ ಪರಂಪರೆ, ಲಾಕುಳಶೈವ, ಕಾಪಾಲಿಕ, ಪಾಶುಪತ ಮಾಹೇಶ್ವರರು, ಕಾಳಾಮುಖರ ಕೊಡುಗೆ, ವಚನ ಚಳುವಳಿ.

ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಸುವ್ಯವಸ್ಥಿತವಾದ ಶಿವಾರಾಧನಾ ಸಾಧಕ ಮಾರ್ಗಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದವು ಎಂಬುದಕ್ಕೆ ಹರಪ್ಪ ಸಂಸ್ಕೃತಿಯಲ್ಲಿನ ಪಶುಪತಿ ಪೂಜೆಯು ಸಾಕ್ಷಿಗಳನ್ನು ಒದಗಿಸುತ್ತದೆ. ಉಪನಿಷತ್ತುಗಳಲ್ಲಿಯೂ ಪಶುಪತಿ ಆರಾಧನೆಯ ಮಾರ್ಗಕ್ಕೆ 'ಶಿರೋವ್ರತ' ಹಾಗೂ 'ಮಹಾವ್ರತ' ಎಂದು ಕರೆಯಲಾಗಿದೆ. ಮಾಂಡೂಕ್ಯ ಉಪನಿಷತ್ತಿನಲ್ಲಿ ಆ ಕಾಲದ ಸೂತ್ರಕಾರರಾದ ಅಷ್ಟಪಾದಾದಿ ದಾರ್ಶನಿಕರು ಪಾಶುಪತ ಮಾಹೇಶ್ವರರಾಗಿದ್ದರು ಎಂಬ ಉಲ್ಲೇಖವಿದೆ. ಪಾಶುಪತದ ಉಗಮವನ್ನು ಕುರಿತು ವಾಯುಪುರಾಣ ಮತ್ತು ಲಿಂಗಪುರಾಣಗಳಲ್ಲಿ ಪೌರಾಣಿಕ ನೆಲೆಯ ವಿವರಗಳಿದ್ದು ಅಲ್ಲಿ ವಿಷ್ಣುವು ವಾಸುದೇವಾವತಾರ ಮಾಡಿದ ಸಮಯದಲ್ಲಿಯೇ ಪರಮೇಶ್ವರನು ಲಗುಡ ಹಸ್ತನಾಗಿ, ಕಾಯಾವರೋಹಣ ಕ್ಷೇತ್ರದಲ್ಲಿ ಬ್ರಾಹ್ಮಣನ ಶರೀರವನ್ನು ಪ್ರವೇಶಿಸಿದನೆಂದು ಹೇಳಲಾಗಿದೆ. ಹೀಗೆ ಲಗುಡ ಹಸ್ತನಾದ ಪರಮೇಶ್ವರನಿಂದ ಪಾಶುಪತ–ಕಾಳಾಮುಖ ಪಂಥವು ಉಗಮವಾಯಿತು ಎನ್ನಲಾಗಿದೆ.

ಪಾಶುಪತ ಮತ್ತು ಕಾಳಾಮುಖ ಪಂಥಗಳು ಒಂದೇ ಶಿವಾರಾಧನಾ ಮಾರ್ಗಕ್ಕಿರುವ ಭಿನ್ನ ಹೆಸರುಗಳೇ? ಅಥವಾ ಈ ಎರಡೂ ಪ್ರತ್ಯೇಕ ಸಾಧಕ ಪಂಥಗಳೇ? ಎಂಬುದರ ಕುರಿತು ಭಿನ್ನಾಭಿಪ್ರಾಯಗಳಿವೆ. "ಪಾಶುಪತರು ಉಜ್ಜಯಿನಿ ಮಹಾಕಾಳ ಪೂಜಕರಾಗಿದ್ದುದರಿಂದ ಕಾಳಾಮುಖರೆಂದೂ, ಲಕುಳೇಶ್ವರ ಸಂಪ್ರದಾಯದವರಾದುದರಿಂದ ಲಾಕುಳರೆಂದೂ ಎನಿಸಿಕೊಂಡರು"[1] ಎಂಬ ಡಾ. ಎಸ್. ಶ್ರೀಕಂಠಶಾಸ್ತ್ರಿಗಳ ಅಭಿಪ್ರಾಯ ಮತ್ತು "ಲಾಕುಳ ಅಥವಾ ಪಾಶುಪತರಿಗೆ

ಕಾಳಾಮುಖರೆಂಬ ಹೆಸರೂ ಇದೆ"[2] ಎಂಬ ಡಾ.ಎಂ.ಚಿದಾನಂದಮೂರ್ತಿಯವರ ಅಭಿಪ್ರಾಯಗಳೆರಡೂ ಪಾಶುಪತ, ಲಾಕುಳ ಮತ್ತು ಕಾಳಾಮುಖ–ಈ ಮೂರೂ ಒಂದೇ ಆಧ್ಯಾತ್ಮಿಕ ಧಾರೆಗಿರುವ ಭಿನ್ನ ಹೆಸರುಗಳು ಎಂಬ ಅರ್ಥವನ್ನು ಕೊಡುತ್ತವೆ. ಕರ್ನಾಟಕದಲ್ಲಿ ದೊರೆತ ಪ್ರಾರಂಭದ ಕೆಲವು ಶಾಸನಗಳು ಕಾಳಾಮುಖವು ಪಾಶುಪತದ ಭಾಗ ಎಂಬ ಅಂಶವನ್ನೇ ಸ್ಫುಟಪಡಿಸುತ್ತವೆ. ಆದರೆ ಕರ್ನಾಟಕದಲ್ಲಿ ಕಾಳಾಮುಖವು ಅತಿ ಹೆಚ್ಚು ಮಹತ್ವ ಪಡೆದ ನಂತರದ ಶಾಸನಗಳಲ್ಲಿ ಪಾಶುಪತವು ಕಾಳಾಮುಖದ ಕವಲೆಂದು ಹೇಳಲಾಗಿದೆ. ಹೀಗೆ ಆಧಾರಗಳು ಸುಸ್ಪಷ್ಟವಾಗಿಲ್ಲದ ಕಾರಣ ನಿಖರವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಬದಲಿಗೆ ಈ ಎರಡೂ ಮಾರ್ಗಗಳ ಅನುಯಾಯಿಗಳೂ ಹೆಚ್ಚೂ ಕಡಿಮೆ ಒಂದೇ ಬಗೆಯ ಮಾರ್ಗಗಳಲ್ಲಿ ಜೀವಿಸುತ್ತಿದ್ದರು ಎಂದಷ್ಟೇ ಊಹಿಸಬಹುದು. ಇದಕ್ಕೆ ಪೂರಕವಾಗಿ ಪುರಾಣಗಳಲ್ಲಿಯೂ ಕಾಳಾಮುಖ, ಪಾಶುಪತ, ಕಾಪಾಲಿಕ ಮತ್ತು ಕೌಳಪಂಥಗಳು ಲಾಕುಳ ಶೈವದ ನಾಲ್ಕು ಪ್ರಭೇದಗಳು. ಇವುಗಳಲ್ಲಿ ಕಾಳಾಮುಖ ಮತ್ತು ಪಾಶುಪತಗಳು ದಕ್ಷಿಣಾಚಾರ(ಸದಾಚಾರ)ವಾಗಿದ್ದರೆ ಉಳಿದವು ವಾಮಾಚಾರವೆನಿಸಿವೆ ಎಂಬ ಅಂಶವನ್ನು ಗಮನಿಸಬಹುದು.

ರಾಮಾನುಜಾಚಾರ್ಯರು ಶ್ರೀಭಾಷ್ಯದಲ್ಲಿ ಮಹಾಭಾರತ ಶ್ಲೋಕಗಳನ್ನನುಸರಿಸಿ ಕಾಪಾಲಿಕರೇ ಕಾಳಾಮುಖರೆಂದು ಹೇಳಿದ್ದಾರೆ. "ಕಾಳಾಮುಖರದು ಅತಿರೇಕದ ಪಂಥವಾಗಿ ತೋರುತ್ತದೆ. ಶಿವಪುರಾಣಗಳಲ್ಲಿ ಅವರನ್ನು ಮಹಾವ್ರತಧರರು ಎಂದು ಕರೆಯಲಾಗಿದೆ. ಮಹಾವ್ರತವೆಂದರೆ ಪರಮ ಪ್ರತಿಜ್ಞೆ, ಈ ಪ್ರತಿಜ್ಞೆಯ ಮಹತಿ ಅದರ ಅಸಾಧಾರಣ ಲಕ್ಷಣದಲ್ಲಿ ಅಡಗಿದ್ದು, ಮಾನವ ಕಪಾಲದಲ್ಲಿ ಆಹಾರವನ್ನು ಸೇವಿಸುವುದು, ಮಾನವ ಶವದ ಬೂದಿಯನ್ನು ದೇಹಕ್ಕೆ ಲೇಪಿಸಿಕೊಳ್ಳುವುದು ಇತ್ಯಾದಿಗಳು"[3] ಎಂಬಂಥ ರಾಮಾನುಜರ ಹೇಳಿಕೆಯನ್ನು ಉದ್ಧರಿಸುತ್ತಾ ಭಂಡಾರಕರರೂ ಕೂಡ ಕಾಳಾಮುಖರನ್ನು ಕಾಪಾಲಿಕರ ಗುಂಪಿಗೇ ಸೇರಿಸಿದ್ದಾರೆ. ಭಂಡಾರಕರರ ಅಭಿಪ್ರಾಯವನ್ನು ಒಪ್ಪದ ಚಿದಾನಂದಮೂರ್ತಿಯವರು"ಕಾಪಾಲಿಕರು ಶೈವಶಾಖೆಯ ಒಂದು ವಾಮಾಚಾರಿ, ಉಗ್ರ ಸ್ವಭಾವದವರಾಗಿದ್ದು ಸಮಾಜದಿಂದಲೇ ಇವರು ದೂರದಲ್ಲಿದ್ದುಕೊಂಡು ನರಬಲಿಗಳಂತಹ ಭಯಂಕರ ಆಚರಣೆಯಲ್ಲಿ ತೊಡಗಿರುತ್ತಿದ್ದರು. ಆದರೆ ಕಾಳಾಮುಖರು ಸಮಾಜದ ಉದ್ಧಾರಕ್ಕಾಗಿ, ಮಹಾಜ್ಞಾನಿಗಳಾಗಿ, ಗುರುಸ್ಥಾನವನ್ನು ಸ್ವೀಕರಿಸಿ, ರಾಜಾಶ್ರಯಗಳಲ್ಲಿ ಸ್ಥಾನವನ್ನು ಪಡೆದುಕೊಂಡು ತಮ್ಮ ಜ್ಞಾನವನ್ನು ಉಪದೇಶಿಸುತ್ತಿದ್ದವರು. ಕಾಳಾಮುಖರದು ಶುದ್ಧ ಸಾತ್ವಿಕ ಆಚರಣೆಗಳ ಪಂಥವಾಗಿದ್ದಿತು"[4] ಎಂದಿದ್ದಾರೆ. ಆ ಕಾಲದ ಕರ್ನಾಟಕದ ಶಾಸನಗಳು, ದೇವಾಲಯಗಳೂ ಮತ್ತು ವೀರಶೈವ ಸಾಹಿತ್ಯವೂ ಕಾಳಾಮುಖರು

ವಾಮಾಚಾರಿಗಳಾಗಿರಲಿಲ್ಲ, ದಕ್ಷಿಣಾಚಾರದ ಅನುಯಾಯಿಗಳಾಗಿದ್ದರು ಎಂಬ ಅಂಶವನ್ನೇ ಅನುಮೋದಿಸುತ್ತವೆ. ಉದಾಹರಣೆಗೆ:

**"ಶೈವ ಸೈವೆರಗಾದ, ಪಾಶುಪತಿ ಪಥವರಿಯ**
**ಕಾಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇರಿದ,**
**ಸಂನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ**
**ತಿರುಗಿದ, ಈ ಆರೂ ಭಕ್ತಿಪಥಕ್ಕೆ ಸಲ್ಲವು ಕೇಳಿರಣ್ಣ"**

ಎಂಬ ಚನ್ನಬಸವಣ್ಣನ ಈ ವಚನವೊಂದನ್ನು ಅಧ್ಯಯನಕ್ಕಾಗಿ ಗಮನಿಸಬಹುದು. ಇಲ್ಲಿಯೂ ಕಾಳಾಮುಖ ಮತ್ತು ಕಾಪಾಲಿಕ ಪಂಥಗಳನ್ನು ಭಿನ್ನಪಥಗಳು ಎಂದೇ ವ್ಯಾಖ್ಯಾನಿಸಲಾಗಿದೆ.

ಕರ್ನಾಟಕದ ಬಹುಮುಖ್ಯ ಧರ್ಮವೆಂದರೆ ವಾಸ್ತವವಾಗಿ ಶೈವಧರ್ಮವೇ. ಈ ಧರ್ಮದಲ್ಲಿ ಅನೇಕ ಪಂಥಗಳಿವೆ. ಅವುಗಳಲ್ಲಿ ಪ್ರಮುಖವಾದವು ಶಿವಾಗಮಗಳಲ್ಲಿ ಉಲ್ಲೇಖವಾಗಿರುವಂತೆ ಕಾಪಾಲಿಕ, ಕಾಳಾಮುಖ, ಪಾಶುಪತ ಮತ್ತು ಶೈವ. ಲಕುಲೀಶ ಪಂಥದವರಾದ ಕಾಳಾಮುಖ ಪಂಥವು ಕ್ರಿ.ಪೂ. 2ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಕಾಳಾಮುಖರು ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದರೆಂದು– ಕಾಲಾ ಎಂಬುದು ಕಾಳಾ ಆಗಿರಬಹುದೆಂದು ಊಹೆಯ ಮೇರೆಗೆ ಅಭಿಪ್ರಾಯ ಪಡಲಾಗಿದೆ. ಆದರೆ ಇವರು ಉತ್ತರದಲ್ಲಿ ನೆಲೆಸಿದ್ದು ನಂತರ ದಕ್ಷಿಣಕ್ಕೆ ಬಂದರು ಎಂಬುದಕ್ಕೆ ಸಾಕಷ್ಟು ಚಾರಿತ್ರಿಕ ವಿವರ ಮತ್ತು ಮಾಹಿತಿಗಳು ದೊರೆಯುವುದಿಲ್ಲ. ಅದೇನಿದ್ದರೂ ಕ್ರಿ.ಶ. 9 ರಿಂದ 12 ನೇ ಶತಮಾನದವರೆಗೂ ಕರ್ನಾಟಕದಲ್ಲಿ ಇವರು ಶೈವ ಶಾಖೆಗಳನ್ನು ಸ್ಥಾಪಿಸಿ ಉನ್ನತ ಸ್ಥಾನದಲ್ಲಿದ್ದರೆಂಬುದು ಆ ಕಾಲದ ಕರ್ನಾಟಕದ ರಾಜರು, ಸಾಮಂತರು ಕಾಳಾಮುಖ ಮಠಗಳಿಗೆ ಮತ್ತು ದೇವಾಲಯಗಳಿಗೆ ನೀಡಿದ ದಾನದತ್ತಿಗಳಿಂದ ವೇದ್ಯವಾಗುತ್ತದೆ. ಶಾತವಾಹನರು, ಕದಂಬರು, ಗಂಗರು, ಚಾಳುಕ್ಯರು, ರಾಷ್ಟ್ರಕೂಟರು, ಕಲಚೂರ್ಯರು, ಹೊಯ್ಸಳರು ಮತ್ತು ವಿಜಯನಗರದ ಸಂಗಮ ವಂಶದವರು ಕರ್ನಾಟಕದ ಕಾಳಾಮುಖರಿಗೆ ಅನೇಕ ದಾನಗಳನ್ನು ಮಾಡಿರುವ ವಿವರಗಳು ಶಾಸನಗಳಿಂದ ದೊರೆಯುತ್ತವೆ. ಇಲ್ಲಿನ ಅನೇಕ ರಾಜರೂ ಪಾಶುಪತ ಮತ್ತು ಕಾಳಾಮುಖ ಶೈವರಾಗಿದ್ದು, ಕಾಳಾಮುಖಾಚಾರ್ಯರು ರಾಜಗುರುಗಳೂ ಆಗಿದ್ದರು. ಕ್ರಿ.ಶ. 9 ಮತ್ತು 10ನೇ ಶತಮಾನಗಳ ಕರ್ನಾಟಕದಲ್ಲಿ ಕಾಳಾಮುಖರು ಲಕುಲೀಶ–ಪಾಶುಪತರೊಂದಿಗೆ ಸ್ಪರ್ಧಿಸುತ್ತಾ, ಅತ್ಯಂತ ಪ್ರಮುಖ ಧಾರ್ಮಿಕ ಗುರುಗಳೂ ಆಗಿದ್ದರು. ಕರ್ನಾಟಕದ ಬೆಳಗಾವಿ, ಹೂಲಿ ಮುಂತಾದ್ದಲ್ಲಿ ಕಾಳಾಮುಖರ ಅನೇಕ ಕೇಂದ್ರಗಳಿದ್ದು, ಇವು ಜ್ಞಾನ ಪ್ರಸಾರದಂತಹ ಪವಿತ್ರ ಕಾರ್ಯದಲ್ಲಿ ತೊಡಗಿರುತ್ತಿದ್ದವು.

ಬಳ್ಳಿಗಾವಿಯ ಕೋಡಿಯಮಠ ಇಂತಹ ಕೇಂದ್ರಗಳಲ್ಲಿ ಒಂದಾಗಿತ್ತು. ಕರ್ನಾಟಕದಲ್ಲಿ ವೀರಶೈವಧರ್ಮ ಪ್ರಸಾರಕ್ಕೆ ಮೊದಲು ಜೈನರನ್ನು ಬಿಟ್ಟರೆ ಕಾಳಾಮುಖರೇ ಅತ್ಯಂತ ಪ್ರಬಲರಾಗಿದ್ದರು ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ.

"ಬಸವಪೂರ್ವದ ವಚನಕಾರರು ಲಕುಲೀಶ ಪಾಶುಪತರಾಗಿದ್ದರೆಂಬುದಕ್ಕೆ ಹಲವು ಗ್ರಂಥಗಳಿಂದ ಆಧಾರಗಳು ದೊರೆಯುತ್ತದೆ. ಲಿಂಗಾಯತನಾಗುವ ಪೂರ್ವದಲ್ಲಿ ಸಿದ್ಧರಾಮನೂ ಬಹುಶ: ನಕುಲೀಶ ಪಾಶುಪತನಾಗಿದ್ದ. ಆ ಅವಧಿಯಲ್ಲಿಯೇ ಅವನು ಕೆಲವು ವಚನಗಳನ್ನು ಬರೆದಿರುವ ಸಾಧ್ಯತೆಯಿದೆ. ಅವನ ವಚನಗಳು ಜೇಡರ ದಾಸಿಮಯ್ಯನ ವಚನಗಳಂತೆ ಪದ್ಯಗಂಧಿಯಾಗಿರುವುದನ್ನು ನೋಡಿದರೆ ಇದು ನಕುಲೀಶ ಪಾಶುಪತದ 'ವಚನ ಶಿಲ್ಪ'ವೆಂದೂ ಮುಂದೆ ಇದು ಬಸವಯುಗದಲ್ಲಿ ಗದ್ಯಗಂಧಿಗೆ ತಿರುಗಿತೆಂದು ಹೇಳಬಹುದು."[5] ಎನ್ನುವ ಶ್ರೀ. ಜೆ. ಕುಮಾರ್‌ರವರು "ವಚನ ರೂಪ ಕನ್ನಡಕ್ಕೆ ನಕುಲೀಶ ಪಾಶುಪತದ ಕೊಡುಗೆಯಾಗಿದ್ದು, ಅದು ಬಸವಪೂರ್ವದಲ್ಲಿ ಹುಟ್ಟಿ, ನಕುಲೀಶ ಪಾಶುಪತರು ಲಿಂಗಾಯತ ಧರ್ಮವಾಗಿ ಬೆಳೆದಂತೆ ತಾನೂ ಅವರ ಮತ್ತು ಇವರ ಕೈಯಲ್ಲಿ ಹುಟ್ಟುತ್ತಾ ಬೆಳೆಯುತ್ತಾ ನಡೆಯಿತೆಂದು ತಿಳಿದುಬರುತ್ತದೆ. ಮುಂದೆ ನಕುಲೀಶ ಪಾಶುಪತವು ಲಿಂಗಾಯತವಾಗುತ್ತ ಹೋದಂತೆ ಸಮಗ್ರ ವಚನಗಳ ಸೃಷ್ಟಿ ಮತ್ತು ಸಂಪತ್ತು ಲಿಂಗಾಯತ ಹೆಸರಿನಲ್ಲಿಯೇ ಪ್ರಚಾರ ಪಡೆಯಿತು"[6] ಎಂದು ಅಭಿಪ್ರಾಯ ಪಡುತ್ತಾರೆ. ವಚನಗಳೇ ಅಲ್ಲದೆ ಪಾಶುಪತ– ಕಾಳಾಮುಖ ಶೈವನಾದ ಪ್ರೌಢದೇವರಾಯರನ್ನು ಸಹ ಅಂದಿನ ವೀರಶೈವ ಸಾಹಿತ್ಯ ಹಾಗೂ ಪುರಾಣ ಕೃತಿಗಳಲ್ಲಿ ವೀರಶೈವನನ್ನಾಗಿ ಚಿತ್ರಿಸಲಾಗಿದೆ. ಅಲ್ಲಿ ಆತನೂ ಸಹ ಬಸವಣ್ಣರಾದಿಯಂತೆ ಕೈಲಾಸದಿಂದ ಭೂಮಿಗೆ ಇಳಿದು ಬಂದವನಂತೆ ಚಿತ್ರಿಸಲ್ಪಟ್ಟಿದ್ದಾನೆ. ಈ ಬಗೆಯ ಮಾರ್ಪಾಡಿಗೆ ಕಾರಣಗಳೇನು? ಎಂಬ ಪ್ರಶ್ನೆ ಚರಿತ್ರೆಯ ಚಲನೆಯನ್ನು ಕುರಿತು ಮಹತ್ವದ ವಿಚಾರಗಳನ್ನು ತೆರೆದಿಡುತ್ತದೆ. ಮಧ್ಯಕಾಲೀನ ಕರ್ನಾಟಕದಲ್ಲಿ ಹಲವು ಧಾರ್ಮಿಕ ಅನುಭಾವಿ ಪಂಥಗಳು ಅಸ್ತಿತ್ವಕ್ಕೆ ಬಂದವು. ಹೀಗೆ ಬಂದ ಹೊಸ ಅಲೆಗೆ ಅಂದಿನ ಪ್ರಭುತ್ವದ ಬೆಂಬಲವೂ ದೊರೆತು ಆ ಪಂಥಗಳ ವಿದ್ವಾಂಸರು, ಕವಿಗಳು, ಅನುಭಾವಿಗಳು ತಮ್ಮ ಸಾಹಿತ್ಯ ರಚನೆಯ ಮೂಲಕ ಇವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. 12 ನೇ ಶತಮಾನದಲ್ಲಿಯೂ ಈ ಎರಡು ಮೂಲಗಳ ಪೂರ್ಣ ಬೆಂಬಲ ಪಡೆದ ಶರಣಧರ್ಮ ಮುಗಿಲು ಮುಟ್ಟುವ ಕೀರ್ತಿ ಗಳಿಸಿತು.

ಶರಣಧರ್ಮ ಇಷ್ಟು ಪ್ರವರ್ಧಮಾನಕ್ಕೆ ಬಂದ ಹೊತ್ತಿನಲ್ಲಿ ಆ ಹೊತ್ತಿಗೆ ಅಸ್ತಿತ್ವದಲ್ಲಿದ್ದ ಹಲವು ಆಧ್ಯಾತ್ಮಿಕ ಕಿರುಧಾರೆಗಳು, ಅಲಕ್ಷಿತವಾದ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಹಲವು ಅನುಭಾವಿ ಪಂಥಗಳು ವೀರಶೈವಧರ್ಮದ ಕಡೆಗೆ ಸಹಜವಾಗಿಯೇ

ಆಕರ್ಷಿತವಾದವು ಮತ್ತು ಹೀಗೆ ಆಶ್ರಯಿಸಬೇಕಾದುದು ಅಂದು ಅವುಗಳಿಗೆ ಅನಿವಾರ್ಯವೂ ಆಗಿತ್ತು. ಹೀಗೆ ಹೊಸ ಅಲೆಯ ಹೊಡೆತದಲ್ಲಿಅಲಕ್ಷಿತಗೊಂಡ ಈ ಆಧ್ಯಾತ್ಮಿಕ ಧಾರೆಗಳು ತಮ್ಮ ತತ್ವಗಳ ಜೊತೆಗೆ ಆಶ್ರಿತ ಧರ್ಮದ ಸಿದ್ಧಾಂತಗಳನ್ನು ಒಪ್ಪಿಕೊಂಡು ಹೋಗಬೇಕಾದ ಸಂಕರವಾದ ಸ್ಥಿತಿಗೆ ತಲುಪಿದವು. ಕರ್ನಾಟಕದಲ್ಲಿ ಕಾಳಾಮುಖ ಪಂಥವೂ ಈ ಬಗೆಯ ಬದಲಾವಣೆಗೆ ಒಳಗಾಯಿತು. ಹೀಗಾಗಿ ಆಧ್ಯಾತ್ಮಿಕ ಪಂಥಗಳ ಅಧ್ಯಯನದ ಹೊತ್ತಿನಲ್ಲೂ ಶರಣಧರ್ಮದಂತಹ ಪ್ರಬಲ ಪಂಥಗಳನ್ನು ಕುರಿತು ಹೆಚ್ಚು ಚರ್ಚೆ ನಡೆಯಿತೇ ಹೊರತು ಅಲಕ್ಷಿತವಾದ, ಸಂಕರಗೊಂಡ ಅನುಭಾವಿ, ಆಧ್ಯಾತ್ಮಿಕ ಪಂಥಗಳ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಲಿಲ್ಲ.

"ಕಾಳಾಮುಖ ಪಂಥವು ಕರ್ನಾಟಕದಲ್ಲಿ ಕ್ರಿ. ಶ. 7 ನೆಯ ಶತಮಾನದಿಂದ ಕಾಣಿಸಿಕೊಳ್ಳುತ್ತಾ ಕ್ರಿ.ಶ. 10ನೆಯ ಶತಮಾನದಲ್ಲಿ ತಲೆಯೆತ್ತಿ, ಕ್ರಿ.ಶ. 11,12,13 ನೇ ಶತಮಾನಗಳಲ್ಲಿ ಉತ್ಕರ್ಷ ಸ್ಥಿತಿಯಲ್ಲಿದ್ದು ಕ್ರಿ.ಶ. 14 ನೆಯ ಶತಮಾನದಲ್ಲಿ ತುರುಕರ ದಾಳಿಯ ಅಶಾಂತತೆಯ ಕಾಲದಲ್ಲಿ ಅಳಿದುಳಿದು, ವಿಜಯನಗರದ ಅರಸರ ಕಾಲದಲ್ಲಿ ಕ್ರಿ.ಶ. 15 ಮತ್ತು 16ನೆಯ ಶತಮಾನಗಳಲ್ಲಿ ಜೀವವಿಡಿದುಕೊಂಡು, ಕ್ರಿ.ಶ. 17ನೇ ಶತಮಾನದಲ್ಲಿ ಸಂಪೂರ್ಣವಾಗಿ ನಾಮಶೇಷವಾಗಿದೆ"[7] ಎಂಬುದು ಕಪಟರಾಳ ಕೃಷ್ಣರಾಯರ ಅಭಿಮತ. ವಿದ್ವಾನ್ ಡಾ. ಅನಂತನಾಗೇಂದ್ರ ಭಟ್ಟರು ಕೂಡ ಈ ಅಭಿಪ್ರಾಯವನ್ನೇ ಅನುಮೋದಿಸುವಂತೆ "ಹಿಂದಿನ ಕಾಲದ ಒಂದು ಸಮಯದಲ್ಲಿ ಕಾಪಾಲಿಕ ಮತ್ತು ಕಾಲಾಮುಖ ಶೈವ – ಈ ಎರಡೂ ಶೈವ ಮತಗಳು ಪ್ರಚಾರದಲ್ಲಿದ್ದವು. ಇವು ಇಂದು ಸಂಪೂರ್ಣವಾಗಿ ನಾಶವಾಗಿರುತ್ತವೆ"[8] ಎನ್ನುತ್ತಾರೆ. ಜೆ. ಕುಮಾರ್‌ವರೂ ಶರಣಧರ್ಮದ ಅಬ್ಬರದ ಪ್ರಚಾರದ ಅಲೆಯಲ್ಲಿ ಅಂದು ಅಸಹಾಯಕ ಸ್ಥಿತಿಯಲ್ಲಿರುವ ಹಲವು ಅನುಭಾವಿ ಧಾರೆಗಳು ಶರಣಧರ್ಮದಲ್ಲಿ ಕರಗಿ ಹೋದವು ಎನ್ನುತ್ತಾರೆ. ಆದರೆ ಒಂದು ಸಂಸ್ಕೃತಿಯಲ್ಲಿ ಅಷ್ಟು ಮಹತ್ವದ ಸ್ಥಾನ ಪಡೆದಿದ್ದ ಯಾವ ಧಾರೆಯೂ ಸುಲಭಕ್ಕೆ ಸಂಪೂರ್ಣವಾಗಿ ಕಣ್ಮರೆಯಾಗಲಾರದು. ಅದು ಬದಲಾದ ರೂಪದಲ್ಲಾದರೂ ತನ್ನ ಸತ್ವವನ್ನು ಉಳಿಸಿಕೊಂಡು ಹೋಗಿರುತ್ತದೆ. ಈ ಅಭಿಪ್ರಾಯವನ್ನು ನಿರ್ದಿಷ್ಟಗೊಳಿಸಿ ವ್ಯಾಖ್ಯಾನಿಸುವುದಾದರೆ, ಆಧುನಿಕ ವೀರಶೈವವು ಮಾರ್ಪಾಡು ಹೊಂದಿದ, ಶುದ್ಧೀಕರಿಸಿದ ಕಾಳಾಮುಖ ಮತ್ತು ಪಾಶುಪತ ಶೈವಗಳ ರೂಪಾಂತರ ಸಮ್ಮಿಶ್ರಣವೇ ಆಗಿದೆ. ಇಂದಿನ ಮಂಟೇಸ್ವಾಮಿ ಪರಂಪರೆಯ ಸಂಪ್ರದಾಯಗಳು ಕಾಳಾಮುಖ ಸಿದ್ಧಾಂತಗಳನ್ನು ಹಲವು ನೆಲೆಗಳಲ್ಲಿ ಹೋಲುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನಗಳು ಸಾಗಿದರೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಆಯಾಮಗಳು ಇನ್ನಷ್ಟು ವಿಸ್ತರಿಸುವ ಸಾಧ್ಯತೆಯಿದೆ.

**ಅಡಿ ಟಿಪ್ಪಣಿಗಳು:**

1. ಶ್ರೀಕಂಠಶಾಸ್ತ್ರೀ ಎಸ್. (2006). ಭಾರತೀಯ ಸಂಸ್ಕೃತಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ಪುಟ ಸಂಖ್ಯೆ. 121
2. ಚಿದಾನಂದಮೂರ್ತಿ ಎಂ. (2015). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು. ಪುಟ ಸಂಖ್ಯೆ. 130
3. ಭಂಡಾರಕರ್ ಆರ್. ಜಿ. Vaishnavism Saivism and Minor religious systems. ಪುಟ ಸಂಖ್ಯೆ. 181
4. ಚಿದಾನಂದಮೂರ್ತಿ ಎಂ. (2015). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು. ಪುಟ ಸಂಖ್ಯೆ. 142
5. ಕುಮಾರ್ ಜೆ. (2008). ನೂರೊಂದು ವಿರಕ್ತರು–ಒಂದು ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು. ಪುಟ ಸಂಖ್ಯೆ. 53
6. ಕುಮಾರ್ ಜೆ. (2008). ನೂರೊಂದು ವಿರಕ್ತರು–ಒಂದು ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು. ಪುಟ ಸಂಖ್ಯೆ. 56
7. ಕುಮಾರ್ ಜೆ. (2008). ನೂರೊಂದು ವಿರಕ್ತರು–ಒಂದು ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು. ಪುಟ ಸಂಖ್ಯೆ. 63
8. ಅನಂತನಾಗೇಂದ್ರಭಟ್ಟ. (2006). ಭಾರತೀಯ ತತ್ತ್ವಶಾಸ್ತ್ರ. ತಳಗವಾದಿ ಪ್ರಕಾಶನ. ಮೈಸೂರು. ಪುಟ ಸಂಖ್ಯೆ. 124

**ಪರಾಮರ್ಶನ ಗ್ರಂಥಗಳು:**

1. ಅಬ್ದುಲ್ ಹಮೀದ್. (1998). ಸೂಫಿಪಥ ಮತ್ತು ಶರಣಪಥಗಳ ತೌಲನಿಕ ಅಧ್ಯಯನ. ಪ್ರಿಯದರ್ಶಿನಿ ಪ್ರಕಾಶನ. ಮೈಸೂರು.
2. ಗೌರಮ್ಮ ವೈ. ಎಸ್. (2001). ಭಾರತೀಯ ತತ್ತ್ವಲಹರಿ. ಸಂಕೇತ ಪ್ರಕಾಶನ. ಬೆಂಗಳೂರು.
3. ಶ್ರೀಕಂಠಶಾಸ್ತ್ರೀ ಎಸ್. (2006). ಭಾರತೀಯ ಸಂಸ್ಕೃತಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
4. ಅನಂತನಾಗೇಂದ್ರಭಟ್ಟ. (2006). ಭಾರತೀಯ ತತ್ತ್ವಶಾಸ್ತ್ರ. ತಳಗವಾದಿ ಪ್ರಕಾಶನ. ಮೈಸೂರು.
5. ಸಿದ್ದಯ್ಯ ಮಠದ. (2006). ವೀರಶೈವ–ಕಾಶ್ಮೀರಿಶೈವ: ಒಂದು ತೌಲನಿಕ ಅಧ್ಯಯನ. ದರ್ಶನ ಪ್ರಕಾಶನ. ಬೆಂಗಳೂರು.
6. ಕುಮಾರ್ ಜೆ. (2008). ನೂರೊಂದು ವಿರಕ್ತರು–ಒಂದು ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು.
7. ವಸುಂಧರಾ ಫಿಲಿಯೋಜಾ. ಹನುಮಾಕ್ಷಿ ಗೋಗಿ (ಅನು). (2007). ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು. ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ. ಬೆಂಗಳೂರು.
8. ಚಿದಾನಂದಮೂರ್ತಿ ಎಂ. (2015). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು.